# ಜೀವನದ ಗತಿ ಬದಲಿಸಿದ ಆ ಒಂದು ನಿರ್ಧಾರ

ಬದುಕಿನ ಕೆಲವೊಂದು ಸಂದರ್ಭದಲ್ಲಿ ತೆಗೆದುಕೊಳ್ಳುವ ತೀರ್ಮಾನಗಳು ಜೀವನದ ಗತಿಯನ್ನೇ ಬದಲಿಸಬಲ್ಲವು ಎಂಬುದಕ್ಕೆ ನಾನೇ ಉದಾಹರಣೆ.

1989ನೇ ಇಸವಿ, ನನ್ನ ಊರು ಸಾಗರ ತಾಲ್ಲೂಕಿನ ಸುಮಾರು 15 ಮನೆಗಳಿರುವ, 40ರಿಂದ 50 ಜನಸಂಖ್ಯೆಯಿರುವ ಹಿರೇಮನೆ ಎಂಬ ಮಲೆನಾಡಿ ಒಂದು ಪುಟ್ಟ ಹಳ್ಳಿ. ಆಗತಾನೆ ಬಿ.ಎಸ್ಸಿ. ಮುಗಿಸಿ, ಆರ್‌ಆರ್‌ಬಿ ಪರೀಕ್ಷೆ ಪಾಸಾಗಿ ರೈಲ್ವೆಯಲ್ಲಿ 'ಡೀಸಲ್ ಅಸಿಸ್ಟಂಟ್' (ಈಗ ಅಸಿಸ್ಟಂಟ್ ಲೋಕೊಪೈಲಟ್) ಆಗಿ ನೇಮಕಗೊಂಡಿದ್ದೆ. ಮೂರು ತಿಂಗಳು ತಮಿಳುನಾಡಿನ ತಿರುಚ್ಚಿಯಲ್ಲಿ ತರಬೇತಿ. ಅಲ್ಲೇ ಹಾಸ್ಟೆಲ್‌ನಲ್ಲಿ ವಾಸ. ಮಲೆನಾಡಿನಲ್ಲಿ ಬೆಳೆದ ನನಗೆ ಆ ವಾತಾವರಣಕ್ಕೆ ಹೊಂದಿಕೊಳ್ಳಲು ತುಂಬಾ ಕಷ್ಟವಾಗಿ ಟೈಫಾಯ್ಡ್ ಜ್ವರ ಬಂದಿತು. ಅಲ್ಲೇ ರೈಲ್ವೆ ಆಸ್ಪತ್ರೆಗೆ ಅಡ್ಮಿಟ್ ಆಗಿ ಸ್ವಲ್ಪ ಗುಣಮುಖನಾದ ಮೇಲೆ ಡಿಸ್ಚಾರ್ಜ್ ಮಾಡಿದರು. ನಾಲ್ಕು ದಿನ ರಜೆ ತೆಗೆದುಕೊಂಡು ಊರಿಗೆ ಮರಳಿದೆ. ಮತ್ತೆ ಕೆಲಸಕ್ಕೆ ಮರಳಲು ನನಗೆ ಒಂದಿಷ್ಟೂ ಇಷ್ಟವಿರಲಿಲ್ಲ. ನಾಲ್ಕು ದಿನ ಕಳೆದ ಮೇಲೆ ಕೆಲಸಕ್ಕೆ ಹೋಗುವುದಿಲ್ಲ ಎಂದು ಮನೆಯಲ್ಲಿ ಹಟ ಮಾಡಿದೆ. ನನ್ನ ತಾಯಿ, ಅಣ್ಣ, ಅಕ್ಕ, 'ಸರ್ಕಾರಿ ಕೆಲಸ ಸಿಗುವುದೇ ಕಷ್ಟ. ಈಗ ಸ್ವಲ್ಪ ಕಷ್ಟವಾದರೂ ಮುಂದೆ ಒಳ್ಳೆಯದಾಗುತ್ತದೆ, ಹೋಗು' ಎಂದು ಧೈರ್ಯ ತುಂಬಿದರು. ನಾನೂ ಮನಸ್ಸು ಬದಲಾಯಿಸಿ ಹೋದೆ. ತರಬೇತಿಯನ್ನು ಯಶಸ್ವಿಯಾಗಿ ಮುಗಿಸಿದೆ.

ಈಗ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ 'ಲೋಕೊಪೈಲಟ್, ಮೇಲ್' ಆಗಿ ಕಾರ್ಯನಿರ್ವಹಿಸುತ್ತಾ ರಾಜಧಾನಿ, ಶತಾಬ್ದಿ, ವಂದೇ ಭಾರತ್‌ನಂತಹ ರೈಲುಗಳನ್ನು ಓಡಿಸುತ್ತಾ, 36 ವರ್ಷಗಳ ಸಾರ್ಥಕ ಸೇವನೆಯನ್ನು ಮುಗಿಸುತ್ತಾ ಮುಂದಿನ ವರ್ಷ ನಿವೃತ್ತಿ ಹೊಂದುತ್ತಿದ್ದೇನೆ. ಕೆಲಸದ ಬಗ್ಗೆ ಧನ್ಯತಾಭಾವ, ಸಂತೋಷ, ಸಂತೃಪ್ತಿ ತುಂಬಿದೆ. ಆ ಸಮಯದಲ್ಲಿ ಬದುಕು ಒಡ್ಡಿದ ಪರೀಕ್ಷೆಯಲ್ಲಿ ಮರುಗಿ ಸೋತಿದ್ದರೆ ಇಂದು ನನಗೆ ಈ ಜೀವನ ಸಿಗುತ್ತಿರಲಿಲ್ಲವೇನೋ!

—ಹಿರೇಮನೆ ಗಂಗರಾಜ, ಬೆಂಗಳೂರು



# ಬದುಕಿನ ಬೆಳ್ಳಿಕಿರಣ

ನಾನು ಪದವಿ ಹಾಗೂ ಲೈಬ್ರರಿಯಲ್ಲಿ ಡಿಪ್ಲೊಮಾ ಪಡೆದು ಉದ್ಯೋಗಕ್ಕಾಗಿ ಅಲೆಯುತ್ತಿದ್ದ ಕಾಲವದು. ಸರ್ಕಾರಿ ಕೆಲಸಕ್ಕೆ ಅರ್ಜಿಗಳನ್ನು ಗುಜರಾಯಿಸಿ ಸುಸ್ತಾಗಿತ್ತು. ಯಾವುದಾದರೂ ಇಂಟರ್‌ವ್ಯೂ ಬಂತೆಂದರೆ ಸಾಲ ಮಾಡಿಕೊಂಡು ಹೋಗ್ತಾ ಇದ್ದೆ. ಹೀಗೆ ಅನೇಕ ಸಲ ಹೋಗಿ ಸಾಕಾಗಿತ್ತೇ ಪರಂತು ಕೆಲಸ ಮಾತ್ರ ಸಿಕ್ಕಲಿಲ್ಲ. ಸರ್ಕಾರಿ ಕೆಲಸಕ್ಕೆ ಸೇರೋ ವಯೋಮಿತಿ ಸಹ ಮುಗೀತಾ ಬರ್ತಿತ್ತು.

ಮನೆಯಲ್ಲಿ, 'ನೀನು ಕೆಲಸಕ್ಕೆ ಅರ್ಜಿ ಹಾಕೋದೂ ಸಾಕು ಅಲೆಯೋದೂ ಸಾಕು. ಯಾವುದಾದರೂ ಮಂಡಿಯಲ್ಲಿ ಕೆಲ್ಸಕ್ಕೆ ಸೇರ್ಕೋ' ಅಂತ ಹೇಳಿದರು. ನಾನೋ ಈ ವ್ಯಾಪಾರದ ಗಂಧ ಗಾಳಿ ಗೊತ್ತಿಲ್ಲದ ಪದವೀಧರ. ಓದು, ಉದ್ಯೋಗ, ವ್ಯಾಪಾರ– ಎತ್ತಣಿಂದೆತ್ತ ಸಂಬಂಧವಯ್ಯಾ? ಅನ್ನುವಂತೆ ನನ್ನ ಜೀವನವಾಗಿತ್ತು. ಆ ಅವಧಿ ನನ್ನ ಪಾಲಿಗೆ ನಿಜಕ್ಕೂ 'ಸತ್ವಪರೀಕ್ಷೆ'ಯಾಗಿತ್ತು. ಏನಾದರೂ ಆಗಲಿ, ಇನ್ನು ಕಾಯದೇ ಯಾವುದಾದರೂ ಕೆಲಸ ಹಿಡಿಯಬೇಕು, ಬದುಕಿಗೆ ಕೆಲಸ ಮುಖ್ಯ ಅಂತ ಮಂಡಿ ಕೆಲಸಕ್ಕೆ ಸೇರಲು ಸಿದ್ಧನಾಗಿದ್ದೆ. ಬದುಕು ಒಡ್ಡಿದ್ದ ಪರೀಕ್ಷೆ ಮುಂದೆ ಸೋತು ಕುಳಿತಿದ್ದೆ.

ಅದೇ ಸಮಯದಲ್ಲಿ ಬ್ಯಾಂಕ್ ಕೆಲಸದಲ್ಲಿದ್ದ ಮಿತ್ರ ಅಚಾನಕ್ಕಾಗಿ ಭೇಟಿಯಾಗಿ 'ಈಗ ಏನು ಮಾಡುತ್ತಿದ್ದೀಯ?' ಅಂದ. 'ನಾಳೆಯಿಂದ ಮಂಡಿ ಕೆಲ್ಸಕ್ಕೆ ಹೊಂಟಿದ್ದೀನಿ, ಓದಿಗೆ ತಕ್ಕ ಕೆಲಸ ಸಿಕ್ತಿಲ್ಲ' ಅಂತ ಒಲ್ಲದ ಮನಸ್ಸಿಂದ ಹೇಳಿದೆ. ಆ ತಕ್ಷಣಕ್ಕೆ 'ನಾನು ಕೆಲಸ ಮಾಡುವ ಊರಿನ ಪ್ರೌಢಶಾಲೆಯಲ್ಲಿ ಲೈಬ್ರರಿಯನ್ ಹುದ್ದೆಗೆ ಕರೆದಿದ್ದಾರೆ. ನಾಳೆಯೇ ಅರ್ಜಿ ಹಾಕಲು ಕೊನೆಯ ದಿನ. ನನ್ನ ಜೊತೆ ಬಾ ಅದೃಷ್ಟ ಇದ್ದರೆ ಕೆಲಸ ಸಿಗಬಹುದು' ಅಂತ ಹೊರಡಿಸಿಯೇ ಬಿಟ್ಟ.

ಕೊನೆಯ ಪ್ರಯತ್ನ ನೋಡೋಣ ಅಂತ ಅರ್ಜಿ ಹಾಕಿದೆ. ಆಶ್ಚರ್ಯವೆಂದರೆ ಆ ನೌಕರಿಗೆ ನಾನೊಬ್ಬನೇ ಅಭ್ಯರ್ಥಿ!. ಕೊನೆಗೂ ನಾನು ಬಯಸಿದ ನೌಕರಿ ಸಿಕ್ಕೇ ಬಿಡ್ತು.

ಬದುಕಿನ ಪರೀಕ್ಷೆಯಲ್ಲಿ ಗೆಲುವಿನ ಕಿರಣ ಹೊಳೆಯಿತು.

—ಜಿ.ಹೆಚ್. ಸಂಕಪ್ಪ, ಮೈಸೂರು



## ನಮ್ಮ ಸುತ್ತಲಿನ ಸಾಧಕಿಯರು

ನಮ್ಮ ಸುತ್ತಮುತ್ತಲೂ, ಹಲವಾರು ಅಡೆತಡೆಗಳನ್ನು ದಾಟಿ, ತಮ್ಮ ಕ್ಷೇತ್ರಗಳಲ್ಲಿ ಗೆಲುವು ಪಡೆದಿರುವ ಯಶಸ್ವಿನಿಯರು ಇರುತ್ತಾರೆ. ಎಲೆಮರೆ ಕಾಯಿಯಂತೆ ದುಡಿಯುತ್ತಿರುವ ಸಾಧಕಿಯರು ನಿಮ್ಮ ಸುತ್ತಲಿದ್ದರೆ ಸಣ್ಣದೊಂದು ಪರಿಚಯ ಬರೆದು ಕಳುಹಿಸಿ. ಅವರ ಸಂಘರ್ಷ, ಉಳಿದವರಿಗೆ ಸ್ಫೂರ್ತಿಯಾಗಬಹುದು. ಪ್ರೇರಣೆ ನೀಡುವಂಥ ಸಾಧಕಿಯರನ್ನು ಪರಿಚಯಿಸಿದರೆ ಆಯ್ದ ಕೆಲವನ್ನು ಪ್ರಕಟಿಸಲಾಗುವುದು. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಗಳ ಮಿತಿಯಲ್ಲಿರಲಿ. ಕೊನೆಯ ದಿನಾಂಕ ಏಪ್ರಿಲ್ 2. ಇಮೇಲ್–**editorsu@sudha.co.in**

